ಮೂಲ ದಾವಾ ಸಂಖ್ಯೆ. 48/2016 ಡಿ ಡಬ್ಲ್ಯೂ 1

(ದಿನಾಂಕ 17-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಬಿ ಎಂ ಎ ವಕೀಲರಿಂದಃ-

ದಾವಾಸ್ತಿಗೆ ಸಂಬಂಧಿಸಿದಂತೆ ಪಟ್ಟಾವನ್ನು ಯಾವ ಅಧಿಕಾರಿಗಳು ಕೊಟ್ಟಿದ್ದರೆಂದು ನನ್ನ ತಾಯಿಗೆ ಗೊತ್ತು ಸಾಕ್ಷಿ ಮುಂದುವರೆದು 60-70 ವರ್ಷದ ಹಿಂದೆ ಕೊಟ್ಟಿದ್ದರೆಂದು ನುಡಿಯುತ್ತಾರೆ. ಪಂಚಾಯ್ತಿಯವರಿಗೆ ನೋಟೀಸಿನ ಮೇಲೆ ಹಾಜರುಪಡಿಸಿದ ದಾಖಲಾತಿಯ ಕುರಿತು ಸ್ವೀಕೃತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಆ ರೀತಿ ನಾನು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ನಿಡಿ-10 ದಾಖಲೆಯಲ್ಲಿ ಯಾವುದೇ ಆಸ್ತಿ ಸಂಖ್ಯೆ, ವಿಸ್ತೀರ್ಣ ನಮೂದಿಲ್ಲವೆಂದರೆ ಸರಿಯಲ್ಲ. ದಾವಾಸ್ತಿಯ ಸರ್ವೆ ನಂಬರಟ್, ಆಸ್ತಿ ನಂಬರ್, ವಿಸ್ತೀರ್ಣ, ಚಕ್ಕುಬಂದಿ ನನಗೆ ಹೇಳಲು ಆಗುವುದಿಲ್ಲ ದಾಖಲೆಯಲ್ಲಿ ನಮೂದು ಇದೆ ಎನ್ನುತ್ತಾರೆ.

ಯಾವುದೇ ಒಂದು ಆಸ್ತಿಯನ್ನು ತಳಪಾಯ ಮಾಡುವ ಸಮಯದಲ್ಲಿ ಪಂಚಾಯ್ತಿಯವರು ಜಿ ಪಿ ಎಸ್ ಮಾಡುತ್ತಾರೆಂದರೆ ಸರಿ. ಆ ರೀತಿ ಜಿ ಪಿ ಎಸ್ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಆ ರೀತಿ ನಾನು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅಲ್ಲಿ ಯಾವುದೇ ರೀತಿಯ ಜಿ ಪಿ ಎಸ್ ಮಾಡಿಲ್ಲ ಆ ಕಾರಣದಿಂದಾಗಿ ನಾನು ಯಾವುದೇ ದಾಖಲೆ ಹಾಜರುಪಡಿಸಿಲ್ಲವೆಂದರೆ ಸರಿಯಲ್ಲ. ಯಾವುದೇ ಒಂದು ಆಸ್ತಿಯನ್ನು ಮಂಜೂರು ಮಾಡಿದಾಗ ಅದರಲ್ಲಿ 6 ತಿಂಗಳ ಒಳಗೆ ಕಟ್ಟಡ ಕಟ್ಟಬೇಕು ಇಲ್ಲವಾದಲ್ಲಿ ಮಂಜೂರಾತಿ ರದ್ದಾಗುತ್ತದೆಂದರೆ ಸಾಕ್ಷಿಯು ನಾವು ಮನೆಯನ್ನು ಕಟ್ಟಿದ್ದೇವೆನ್ನುತ್ತಾರೆ. ಆ ರೀತಿ ನಾವು ಮನೆ ಕಟ್ಟಲಿಲ್ಲವಾದ್ದರಿಂದ ನಿಡಿ-12 ರಂತೆ ಗ್ರಾಮ ಪಂಚಾಯ್ತಿಯವರು ನಮಗೆ ನೋಟೀಸ್ ನೀಡಿರುತ್ತಾರೆಂದರೆ ಸುಳ್ಳು. ಆ ರೀತಿ ನೋಟೀಸ್ ಕೊಟ್ಟಿದ್ದರೂ ಸಹಾ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಈಗ ಕಟ್ಟಿರುವ ಮನೆಯ ಆಸ್ತಿ ನಂಬರ್ ವಿಸ್ತೀರ್ಣ ನನಗೆ ಹೇಳಲು ಬರುವುದಿಲ್ಲ.

ಊರಲ್ಲಿ ಯಾರಾದರೂ ತೀರಿಕೊಂಡಲ್ಲಿ ಅವರ ಅಂತಿಮ ಸಂಸ್ಕಾರ ನಿರ್ಮಿಸಲು ನಾನು ಜಾಗವನ್ನು ತೋರಿಸಿ ಪೂಜೆಯನ್ನು ಮಾಡಿ ಬರುತ್ತೇನೆಂದರೆ ಸರಿ. ಆ ವಿಶ್ವಾಸದಿಂದ ನನ್ನ ಪರವಾಗಿ ಸಾಕ್ಷಿ ನುಡಿಯಲು ಬಂದಿರುತ್ತಾರೆಂದರೆ ಸರಿಯಲ್ಲ.

ಮೂಲ ದಾವಾ ಸಂಖ್ಯೆ. 48/2016 ಡಿ ಡಬ್ಲ್ಯೂ 1

ವಾದಿಗೆ ಆಸ್ತಿಯನ್ನು ಮಂಜೂರು ಮಾಡಿರುವುದನ್ನು ಪ್ರಶ್ನಿಸಿ ನಾನು ಸಂಬಂಧಿಸಿದ ಇಲಾಖೆಯಲ್ಲಿ ತಕರಾರನ್ನು ಸಲ್ಲಿಸಿದ್ದೇನೆ.ಆ ಬಗ್ಗೆ ನಾನು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಆ ರೀತಿ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ನಿಮ್ಮ ತಾಯಿಗೆ ಎಷ್ಟು ಆಸ್ತಿಗಳು ಇದ್ದವು ಎಂದರೆ ಸಾಕ್ಷಿಯು ಒಂದೇ ಆಸ್ತಿ ಇತ್ತು ಎನ್ನುತ್ತಾರೆ. ಅದರ ಖಾತಾ ನಂ. 1 ಇರುತ್ತದೆ. ಸದರಿ ಆಸ್ತಿಯನ್ನು ನಾವು ಮೂರು ಜನ ಸೋದರಿಯರು ಭಾಗ ಮಾಡಿಕೊಂಡಿದ್ದೇವೆ. ಆ ಭಾಗದಲ್ಲಿ ಯಾರ್ಯಾರಿಗೆ ಎಷ್ಟು ಎಷ್ಟು ಆಸ್ತಿ ಬಂತು ಅಂತಾ ಹೇಳಲು ಬರುವುದಿಲ್ಲ. ಸಾಕ್ಷಿ ಮುಂದುವರೆದು ಸಂಪೂರ್ಣ ಆಸ್ತಿ ನನ್ನೊಬ್ಬಳಿಗೆ ಬಿಟ್ಟಿದ್ದಾರೆನ್ನುತ್ತಾರೆ. ಆ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಆ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ದಾವಾಸ್ತಿಗೂ ನನಗೂ ತೊಂದರೆ ಇಲ್ಲ ವಾದಿಗೆ ತೊಂದರೆ ಕೊಡುವ ದುರುದ್ದೇಶದಿಂದ ಸುಳ್ಳು ಪ್ರತಿವಾದ ಪತ್ರವನ್ನು ದಾಖಲಿಸಿ ಸುಳ್ಳು ಸಾಕ್ಷಿ ಪ್ರಮಾಣಪತ್ರವನುನ ಹಾಜರುಪಡಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವಂತಹ ದಾಖಲೆಗಳು ದಾವಾಸ್ತಿಗೆ ಸಂಬಂಧಿಸಿದ್ದು ಇಲ್ಲ ದಾವಾಸ್ತಿಯನ್ನು ಕಬಳಿಸುವ ಉದ್ದೇಶದಿಂದ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಬಂದು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ. ದಾವಾಸ್ತಿಗೆ ನಾನು ಯಾವುದೇ ರೀತಿಯಿಂದ ತೆರಿಗೆ ಕಟ್ಟಿಲ್ಲ ದಾವಾಸ್ತಿಯಲ್ಲಿ ಯಾವತ್ತೂ ಸ್ವಾಧೀನದಲ್ಲಿಲ್ಲ, ನಾವು ವಾಸವಾಗಿರುವ ಮನೆಯ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ದಾವಾಸ್ತಿಯ ಮೇಲೆ ಸುಳ್ಳು ಹಕ್ಕನ್ನು ಸಾಧಿಸುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ